

ಪೋಸ್ಟ್‌ಮಾರ್ಟಂ ಹಾಲಿನಲ್ಲಿ ಶವವೊಂದರ ಪೋಸ್ಟ್‌ಮಾರ್ಟಂ ನಡೆಸಿದ್ದ ಆ ವಿಭಾಗದ ಪ್ರೊಫೆಸರ್ ವಿದ್ಯಾರ್ಥಿಗಳಿಗೆ ವಿವರಣೆ ನೀಡುತ್ತಿದ್ದರು.

ಆ ಯುವಕನ ಸಾವು ಅಸಹಜವಾದದ್ದು, ಅದೊಂದು ಕೊಲೆಯೆಂದು ಅನಾಮಧೇಯ ಕರೆಯಿಂದ ಆಗಲೆ ಹೂತಿದ್ದ ಶವವನ್ನು ತೆಗೆದು ಪೊಲೀಸರು ಮರು ಶವಪರೀಕ್ಷೆಗೆಂದು ತಂದಿದ್ದರು. ಶವವು ಕೊಳೆತ ಸ್ಥಿತಿಯಲ್ಲಿದ್ದುದರಿಂದ ವಿಪರೀತ ದುರ್ವಾಸನೆಯಿಂದ ಕೂಡಿತ್ತು. ಎಲ್ಲರೂ ಮಾಸ್ಕ್ ಧರಿಸಿದ್ದರು.

ಪ್ರೊಫೆಸರ್ ಗಂಭೀರವಾಗಿ ಹೇಳುತ್ತಾ ಶವದ ಮೇಲಿನ ಗುರುತುಗಳನ್ನು ತೋರಿಸುತ್ತಿದ್ದರು. 'ನೋಡಿ... ಈ ಹಿಂದೆ ಅಂದರೆ ಒಂದು ವಾರದ ಹಿಂದೆ ಪೋಸ್ಟ್‌ಮಾರ್ಟಂ ಮಾಡಿದ ವೈದ್ಯರು, ಶವದ ತಲೆಯ ಭಾಗವನ್ನು ನೋಡಿರಲಿಲ್ಲ. ಪೋಸ್ಟ್‌ಮಾರ್ಟಂ ಮಾಡಿಯೂ ಇರಲಿಲ್ಲ. ಮೆಟ್ಟಲಿನಿಂದ ಜಾರಿ ಬಿದ್ದ ಪರಿಣಾಮ ಈತ ಮೃತಪಟ್ಟಿದ್ದಾನೆ, ದೇಹದ ಯಾವುದೇ ಭಾಗಕ್ಕೂ ತೀವ್ರ ತರಹದ ಪೆಟ್ಟು ಬಿದ್ದಿಲ್ಲವಾದ ಕಾರಣ ಭಯದಿಂದ ಹೃದಯ ಸ್ತಂಭನವಾಗಿ ಮೃತಪಟ್ಟಿದ್ದಾನೆಂದು